# ಮಲ್ಲೈಕಾ ಪಾತ್ರ ವಿಮರ್ಶೆ



ಕಿರುತೆರೆಯಿಂದ ಹಿರಿತೆರೆಗೆ ಕಾಲಿಟ್ಟು ತಮ್ಮದೇ ಗುರುತು ಮೂಡಿಸಿಕೊಳ್ಳುತ್ತಿರುವ ನಟಿ ಮಲ್ಲೈಕಾ ವಸುಪಾಲ್, ಇದೀಗ 'ಕಲ್ಟ್' ಸಿನಿಮಾ ಮೂಲಕ ಸ್ಪಾಟ್‌ಲೈಟ್‌ನಲ್ಲಿದ್ದಾರೆ.

'ಹಿಟ್ಲರ್ ಕಲ್ಯಾಣ' ಧಾರಾವಾಹಿಯಲ್ಲಿ ನಟಿಸಿ 'ಉಪಾಧ್ಯಕ್ಷ' ಹಾಗೂ 'ವಿದ್ಯಾಪತಿ' ಸಿನಿಮಾಗಳ ಮೂಲಕ ಚಿತ್ರರಂಗಕ್ಕೆ ಪರಿಚಿತರಾದ ಅವರು 'ಕಲ್ಟ್' ಸಿನಿಮಾದಲ್ಲಿ ಝೈದ್ ಖಾನ್ ಜೊತೆ ನಟಿಸುತ್ತಿದ್ದಾರೆ.

'ಒಂದು ಸಿನಿಮಾ ಮುಗಿಸಿದ ತಕ್ಷಣ ನಾನು ಮತ್ತೊಂದು ಸಿನಿಮಾಗೆ ಜಿಗಿಯುವುದಿಲ್ಲ. ನಾವು ನಟಿಸಿದ ಸಿನಿಮಾಗೆ ನಮ್ಮಿಂದ ಅತ್ಯುತ್ತಮವಾದದ್ದನ್ನು ನೀಡಲೇಬೇಕು. ಸಿನಿಮಾದಲ್ಲಿ ನಟಿಸುವುದು ಮಾತ್ರವಲ್ಲ, ಸಿನಿಮಾದ ಪ್ರತಿ ಹಂತದಲ್ಲಿಯೂ ಜೊತೆಗೂಡುತ್ತೇನೆ' ಎಂದಿದ್ದಾರೆ. 'ಕಲ್ಟ್' ಸಿನಿಮಾ ಪ್ರಚಾರದಲ್ಲಿ ತಾವು ತೊಡಗಿಕೊಂಡದ್ದು ಹೊಸದಾದ, ಎಕ್ಸೈಟಿಂಗ್ ಆದ ಅನುಭವಗಳನ್ನು ನೀಡಿದೆ ಎಂಬ ಖುಷಿಯನ್ನೂ ವ್ಯಕ್ತಪಡಿಸಿದ್ದಾರೆ. ಇದರಿಂದ ಉತ್ತಮ ಎಕ್ಸ್‌ಪೋಷರ್ ಸಿಕ್ಕಿರುವುದಾಗಿಯೂ ಹೇಳಿದ್ದಾರೆ.

'ನನ್ನನ್ನು ಜನರು ಹೇಗೆ ಸ್ವೀಕರಿಸುತ್ತಾರೆ ಎಂಬ ಭಯ ಇತ್ತು. ಇದೇ ಭಯ ನನ್ನನ್ನು ಮುಂದಕ್ಕೆ ತಳ್ಳಿತು. ಆಗಾಗ್ಗೆ ಎಚ್ಚರಿಕೆಯನ್ನೂ ನೀಡುತ್ತಿರುತ್ತದೆ' ಎಂದಿದ್ದಾರೆ. 'ಕಲ್ಟ್' ತಮ್ಮ ಪಾಲಿಗೆ ಪ್ರಮುಖ ಪ್ರಾಜೆಕ್ಟ್ ಆಗಿದ್ದು, ತಮ್ಮ ಪಾತ್ರಕ್ಕೆ ಎರಡು ಶೇಡ್‌ಗಳಿರುವುದಾಗಿ ವಿವರಿಸಿದ್ದಾರೆ. ಈ ಸಿನಿಮಾಗೆ ತಮ್ಮ ಪಾತ್ರ ಕಿಕ್ ನೀಡುವುದಾಗಿಯೂ ತಿಳಿಸಿದ್ದಾರೆ.

'ರಚಿತಾ ರಾಮ್ ಅವರು ತಮ್ಮ ಅನುಭವವನ್ನು ಸಿನಿಮಾಗೆ ತಂದಿದ್ದಾರೆ. ಪ್ರಾಮಾಣಿಕವಾಗಿ ನನ್ನ ಕೆಲಸವನ್ನು ಮಾಡಿದ್ದೇನೆ. ಹೀರೋಗಳಿಗೆ ಮೊದಲ ಇಂಪ್ರೆಷನ್ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಸಿನಿಮಾ ಯಶಸ್ಸು ಪಡೆದರೆ, ಪ್ರತಿ ಪಾತ್ರ ಕೂಡ ತಮ್ಮದೇ ಸ್ಥಾನ ಪಡೆಯುತ್ತದೆ' ಎಂದು ಆಶಾಭಾವ ವ್ಯಕ್ತಪಡಿಸಿದ್ದಾರೆ. ಇದೇ ಜ. 23ಕ್ಕೆ 'ಕಲ್ಟ್' ಬಿಡುಗಡೆಯಾಗುತ್ತಿದೆ.

# ಕನ್ನಡದಲ್ಲಿ ನಟಿಸಲು ಇಷ್ಟ; ಕೃತಿ ವರ್ಮಾ

'ಕರಿಕಾಡ' ಸಿನಿಮಾದ 'ರತುನಿ ರತುನಿ' ಹಾಡಿನಲ್ಲಿ ಹೆಜ್ಜೆ ಹಾಕಿರುವ ನಟಿ ಕೃತಿ ವರ್ಮಾ, ಈ ಹಾಡಿನ ಮೂಲಕ ಕನ್ನಡ ಸಿನಿಮಾಗೆ ಎಂಟ್ರಿ ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಕನ್ನಡ ಸಿನಿಮಾಗಳಲ್ಲಿ ನಟಿಸಲು ಬಹಳ ಇಷ್ಟವಿರುವುದಾಗಿಯೂ ತಮ್ಮ ಮನದಿಂಗಿತವನ್ನು ಹಂಚಿಕೊಂಡಿದ್ದಾರೆ.

ನಟಿ ಹಾಗೂ ಹಿಂದಿ ಬಿಗ್ ಬಾಸ್‌ನ ಮಾಜಿ ಸ್ಪರ್ಧಿ ಕೃತಿ ವರ್ಮಾ, ತಾವು ಹೆಜ್ಜೆ ಹಾಕಿರುವ ಚೊಚ್ಚಲ ಕನ್ನಡ ಸಿನಿಮಾ 'ಕರಿಕಾಡ'ದ ಕುರಿತು ಮೆಚ್ಚುಗೆಯ ಮಾತನಾಡಿದ್ದಾರೆ.

'ಇದು ನನ್ನ ಮೊದಲ ಕನ್ನಡ ಸಿನಿಮಾ. ಒಂದು ಪಾಸಿಟಿವ್ ಅನುಭವ ನೀಡಿದೆ. ನನ್ನ ಮೇಲೆ ನಂಬಿಕೆ ಇಟ್ಟು ಈ ಅವಕಾಶ ಕೊಟ್ಟಿದ್ದಕ್ಕೆ ಚಿತ್ರತಂಡಕ್ಕೆ ಧನ್ಯವಾದಗಳು. ಈ ಸಿನಿಮಾದೊಂದಿಗೆ ಕನ್ನಡ ಪ್ರೇಕ್ಷಕರಿಗೆ ನಾನು ಪರಿಚಯವಾಗುತ್ತೇನೆ. ಮುಂದೆ ಕನ್ನಡದ ಪ್ರಾಜೆಕ್ಟ್‌ಗಳಲ್ಲಿ ನಟಿಸಲು ಇಷ್ಟಪಡುತ್ತೇನೆ ಕೂಡ' ಎಂದು ಹೇಳಿದ್ದಾರೆ. ಗಿಲ್ಲಿ ವೆಂಕಟೇಶ್ ಈ ಸಿನಿಮಾ ನಿರ್ದೇಶಿಸುತ್ತಿದ್ದು, ಕಾಡ ನಟರಾಜ್ ನಾಯಕ ನಟರಾಗಿದ್ದಾರೆ. ನಿರೀಕ್ಷಾ ಶೆಟ್ಟಿ ನಾಯಕಿಯಾಗಿ ಬಣ್ಣ ಹಚ್ಚಿದ್ದಾರೆ.



# ರೈತನಾದ ವಿಜಯ್



ರೈತನ ಪಾತ್ರಕ್ಕೆ ನಟ ವಿಜಯ್ ರಾಘವೇಂದ್ರ ಬಣ್ಣ ಹಚ್ಚಿದ್ದು, ಈಚೆಗೆ ಸಿನಿಮಾದ ಫಸ್ಟ್ ಲುಕ್ ಬಿಡುಗಡೆಯಾಗಿದೆ. ರೈತರ ಕುರಿತಾದ ಕಥಾಹಂದರ ಹೊಂದಿರುವ ಚಿತ್ರಕ್ಕೆ 'ಮಹಾನ್' ಎಂದು ಹೆಸರಿಟ್ಟಿದ್ದು, ವಿಜಯ್ ರೈತರ ಪರ ದನಿ ಎತ್ತುವ ಪಾತ್ರದಲ್ಲಿ ಗಮನಸೆಳೆಯಲಿದ್ದಾರೆ.

ಪಿ.ಸಿ. ಶೇಖರ್ ನಿರ್ದೇಶನದಲ್ಲಿ ಸಿನಿಮಾ ಮೂಡಿಬರುತ್ತಿದೆ. "ರೈತರ ಕುರಿತಾದ ಕಥಾಹಂದರ ಹೊಂದಿರುವ ಚಿತ್ರವಿದು. ಇಲ್ಲಿ 'ಮಹಾನ್' ಎಂದರೆ ರೈತ. ಇದೊಂದು ರೈತರ ಬದುಕಿನ ಬವಣೆಗಳನ್ನು ತಿಳಿಸುವ ಕಥಾಹಂದರ ಹೊಂದಿರುವ ಚಿತ್ರ. ನಮಗೆ ದೇಶ ಕಾಯುವ ಸೈನಿಕರು ಎಷ್ಟು ಮುಖ್ಯವೊ, ಅದೇ ರೀತಿ ರೈತರು ಕೂಡ ಬಹುಮುಖ್ಯ. ಇಂತಹ ರೈತರ ಕಷ್ಟಗಳಿಗೆ ಸ್ಪಂದಿಸುವ ಹಾಗೂ ಅವರ ಪರ ಧ್ವನಿ ಎತ್ತುವ ಪಾತ್ರದಲ್ಲಿ ವಿಜಯ್ ರಾಘವೇಂದ್ರ ಕಾಣಿಸಿಕೊಂಡಿದ್ದಾರೆ" ಎಂದು ವಿವರಿಸಿದ್ದಾರೆ ಪಿ.ಸಿ. ಶೇಖರ್.

ನಟಿ ರಾಧಿಕಾ ನಾರಾಯಣ್, ಮಿತ್ರ, ನಮ್ರತಾ ಗೌಡ, ವರ್ಷ ಬೊಳ್ಳಮ್ಮ ಮುಂತಾದವರು ಈ ಚಿತ್ರದಲ್ಲಿದ್ದಾರೆ.